**ಹಿರಿಯ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹೊಸದುರ್ಗ.**

**ಉಪಸ್ಥಿತರುಃ- ಶ್ರೀ ವೈ. ಕೆ. ಬೇನಾಳ**, ಬಿ.ಎ., ಎಲ್.ಎಲ್.ಬಿ., (ಆನರ್ಸ್),
ಹಿರಿಯ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶರು,
ಹೊಸದುರ್ಗ.

**ದಿನಾಂಕ 30 ನೇ ಜೂನ್ 2025**

**<u>ಅಸಲು ದಾವೆ ಸಂಖ್ಯೆಃ 197/2024</u>**

**<u>ವಾದಿಗಳುಃ-</u>**

1) ಶ್ರೀಮತಿ ರತ್ನಮ್ಮ ಮತ್ತು ಇತರರು

ವಿರುದ್ಧ

**<u>ಪ್ರತಿವಾದಿಗಳುಃ-</u>**

1) ಶ್ರೀಮತಿ ಅನ್ನಪೂರ್ಣಮ್ಮ ಮತ್ತು ಇತರರು

**<u>ಮಧ್ಯಂತರ ಅರ್ಜಿ ಸಂಖ್ಯೆ-4</u>**

**<u>ಅರ್ಜಿದಾರರು /3 ರಿಂದ 5 ನೇ ಪ್ರತಿವಾದಿಗಳು -</u>**

1. ಶ್ರೀಮತಿ ಲಕ್ಷ್ಮಿದೇವಿ ಗಂಡ ಲೇಟ್ ರಾಜಪ್ಪ,
ವಯಸ್ಸು ಸುಮಾರು 45 ವರ್ಷ,
ವ್ಯವಸಾಯ,

2. ಮಂಜುನಾಥ ತಂದೆ ಲೇಟ್ ರಾಜಪ್ಪ,
ವಯಸ್ಸು ಸುಮಾರು 25 ವರ್ಷ,
ವ್ಯವಸಾಯ

3. ರಾಘು ತಂದೆ ಲೇಟ್ ರಾಜಪ್ಪ,
ವಯಸ್ಸು ಸುಮಾರು 24 ವರ್ಷ,
ವ್ಯವಸಾಯ.
ಎಲ್ಲರ ವಾಸಃ ಹೊನ್ನೇನಹಳ್ಳಿ ಗ್ರಾಮ,
ಮಾಡದಕೆರೆ ಹೋಬಳಿ,
ಹೊಸದುರ್ಗ ತಾಲ್ಲೂಕು.

**(ಅರ್ಜಿದಾರರ ಪರ ವಕೀಲರು - ಶ್ರೀ ಶರಣಪ್ಪ ಆರ್)**

**ವಿರುದ್ಧ**

**ಎದುರುದಾರರು/ ವಾದಿಗಳು -**

1) ಶ್ರೀಮತಿ ರತ್ನಮ್ಮ,
ತಂದೆ ಲೇಟ್ ಹೊಸಕೇರಪ್ಪ,
ಅಲಿಯಾಸ್ ಹೊರಕೇರಪ್ಪ,
ಗಂಡ ರಾಮಪ್ಪ,
ವಯಸ್ಸು ಸುಮಾರು 55 ವರ್ಷ,
ಮನೆಗೆಲಸ,
ವಾಸಃ ನಾಗತಿಹಳ್ಳಿ ಗ್ರಾಮ,
ಮತ್ತೋಡು ಹೋಬಳಿ,
ಹೊಸದುರ್ಗ ತಾಲ್ಲೂಕು.

2) ಶ್ರೀಮತಿ ಗೌರಮ್ಮ,
ತಂದೆ ಲೇಟ್ ಹೊಸಕೇರಪ್ಪ
ಅಲಿಯಾಸ್ ಹೊರಕೇರಪ್ಪ,
ಗಂಡ ಸಣ್ಣಪ್ಪ,
ವಯಸ್ಸು ಸುಮಾರು 46 ವರ್ಷ,
ಗೃಹಿಣಿ,
ವಾಸಃ ಮೆಂಗಸಂದ್ರ ಗ್ರಾಮ,
ಹಿರಿಯೂರು ತಾಲ್ಲೂಕು.

3) ಶ್ರೀಮತಿ ಲಕ್ಕಮ್ಮ,
ತಂದೆ ಲೇಟ್ ಹೊಸಕೇರಪ್ಪ,
ಅಲಿಯಾಸ್ ಹೊರಕೇರಪ್ಪ,
ಗಂಡ ರಂಗಸ್ವಾಮಿ,
ವಯಸ್ಸು ಸುಮಾರು 44 ವರ್ಷ,
ಗೃಹಿಣಿ,
ವಾಸಃ ನಂದನಹೊಸೂರು ಗ್ರಾಮ,
ತಾಳ್ಯ ಹೋಬಳಿ,
ಹೊಳಲ್ಕೆರೆ ತಾಲ್ಲೂಕು,
ಚಿತ್ರದುರ್ಗ ಜಿಲ್ಲೆ.

**(ಎದುರುದಾರರ ಪರ ವಕೀಲರು - ಶ್ರೀ ಹೆಚ್.ಬಿ. ರವಿಕುಮಾರ್)**

-:oOo:-

**ಮಧ್ಯಂತರ ಅರ್ಜಿ ಸಂಖ್ಯೆ-4 ರ ಮೇಲೆ ಆದೇಶ**

ಅರ್ಜಿದಾರರು / 3 ರಿಂದ 5 ನೇ ಪ್ರತಿವಾದಿಯರು ಈ ಮಧ್ಯಂತರ ಅರ್ಜಿ ಸಂಖ್ಯೆ-4 ನ್ನು ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 7 ನಿಯಮ 11(ಡಿ) ಹಾಗೂ ಸಹವಾಚಕ ಕಲಂ 151 ರ ಅಡಿಯಲ್ಲಿ ಸಲ್ಲಿಸಿ, ವಾದಪತ್ರವನ್ನು ತಿರಸ್ಕರಿಸಬೇಕೆಂದು ಕೋರಿರುತ್ತಾರೆ.

**2.** 1 ನೇ ಅರ್ಜಿದಾರಳು/3 ನೇ ಪ್ರತಿವಾದಿಯು ಈ ಮಧ್ಯಂತರ ಅರ್ಜಿಯನ್ನು ತನ್ನ ಪ್ರಮಾಣಪತ್ರದೊಂದಿಗೆ ಸಲ್ಲಿಸಿ, ಅದರಲ್ಲಿ ವಿವರವಾದ ಕಾರಣವನ್ನು ಹೇಳಿ, ಸದರಿ ಕಾರಣಗಳ ಮೇಲೆ ಈ ಮಧ್ಯಂತರ ಅರ್ಜಿಯನ್ನು ಪುರಸ್ಕರಿಸಬೇಕು ಎಂದು ಪ್ರಾರ್ಥಿಸಿಕೊಂಡಿರುತ್ತಾಳೆ.

**3.** ಎದುರುದಾರರು/ವಾದಿಗಳು ಈ ಮಧ್ಯಂತರ ಅರ್ಜಿಗೆ ತಕರಾರನ್ನುಸಲ್ಲಿಸಿ, ಅದರಲ್ಲಿ ವಿವರವಾದ ಕಾರಣಗಳನ್ನು ಹೇಳಿ, ಸದರಿ ಕಾರಣಗಳ ಮೇಲೆ ಸದರಿ ಅರ್ಜಿಯನ್ನು ವಜಾಗೊಳಿಸಬೇಕೆಂದು ಪ್ರಾರ್ಥಿಸಿಕೊಂಡಿರುತ್ತಾರೆ.

**4.** ಉಭಯಪಕ್ಷಗಾರರ ಪರ ವಕೀಲರು ವಾದವನ್ನು ಸಲ್ಲಿಸಿರುತ್ತಾರೆ.

**5.** ನನ್ನ ಪರಿಗಣನೆಗೆ ಈ ಕೆಳಕಂಡ ಅಂಶಗಳು ಉದ್ಭವಿಸಿರುತ್ತವೆಃ-

ಅಂಶ-1 - ಅರ್ಜಿದಾರರು / 3 ರಿಂದ 5 ನೇ ಪ್ರತಿವಾದಿಯರು ಈ ಮಧ್ಯಂತರ ಅರ್ಜಿಯಲ್ಲಿ ಕೋರಿರುವಂತೆ, ವಾದಪತ್ರವನ್ನು ತಿರಸ್ಕರಿಸಲು ಇರುವಂತಹ ಕಾರಣಗಳನ್ನು ತೋರಿಸಿದ್ದಾರೆಯೇ?

ಅಂಶ- 2- ಯಾವ ಆದೇಶ?

**6.** ಮೇಲಿನ ಅಂಶಗಳಿಗೆ ಈ ಕೆಳಕಂಡ ಕಾರಣಗಳಿಗಾಗಿ ಈ ಕೆಳಕಂಡಂತೆ ಉತ್ತರಿಸುತ್ತಿದ್ದೇನೆಃ-

ಅಂಶ-1 - ನಕರಾತ್ಮಕ ಮತ್ತು

ಅಂಶ-2 - ಅಂತಿಮ ಆದೇಶದಂತೆಃ

**<u>ಕಾರಣಗಳು</u>**

**7**. **<u>ಅಂಶ-1</u>**– ವಾದಿಗಳು ತಮ್ಮ ವಾದಪತ್ರದಲ್ಲಿ, ವಾದಿಗಳು ಮತ್ತು ಪ್ರತಿವಾದಿಗಳು ಹಿಂದು ಜಂಟಿ ಕುಟುಂಬದ ಸದಸ್ಯರಾಗಿದ್ದು, ದಾವಾ ಆಸ್ತಿಗಳು ವಾದಿಗಳ ಮತ್ತು ಪ್ರತಿವಾದಿಗಳ ಪಿತ್ರಾರ್ಜಿತ ಜಂಟಿ ಕುಟುಂಬದ ಆಸ್ತಿಗಳಾಗಿದ್ದು, ವಾದಿಗಳು ಮತ್ತು ಪ್ರತಿವಾದಿಗಳು ಜಂಟಿಯಾಗಿ ಅನುಭವಿಸುತ್ತಾ ಬರುತ್ತಿದ್ದು, ಹೊರಕೇರಪ್ಪ ಮೃತಪಟ್ಟ ನಂತರ ವಾದಿಗಳ ಮತ್ತು ಪ್ರತಿವಾದಿಗಳ ಕುಟುಂಬದ ಸದಸ್ಯರ ಮಧ್ಯೆ ವ್ಯತ್ಯಾಸಗಳು ಬಂದಿದ್ದರಿಂದ, ವಾದಿಗಳು ಮತ್ತು 1 ರಿಂದ 3 ನೇ ಪ್ರತಿಗಳಿಗೆ ಭೇಟಿ ಮಾಡಿ ದಾವಾ ಆಸ್ತಿಗಳಲ್ಲಿ ತಮ್ಮ ಹಿಸ್ಸೆಯನ್ನು ಹಂಚಿಕೊಡಬೇಕೆಂದು ಕೇಳಿರುತ್ತದೆ ಎಂದು ಹಾಗೂ ಹೊಸಕೇರಪ್ಪ ಇವನ ಜೀವಿತಾವಧಿಯಲ್ಲಿ ಮೊದಲೆ ಹೆಂಡತಿಯ ಮಗ ರಂಗಪ್ಪ ಮೂಲ ದಾವೆ ನಂ-307/1999 ನ್ನು ಹೊಸಕೇರಪ್ಪ, ರಾಜಪ್ಪ ಮತ್ತು ಶಿವಮ್ಮ ಇವರ ವಿರುದ್ಧ ಹೊಸದುರ್ಗದ ಸಿವಿಲ್ ನ್ಯಾಯಾಲಯದಲ್ಲಿ ಸಲ್ಲಿಸಿದ್ದು, ಅದು ದಿನಾಂಕ: 27-01-2000 ನೇ ಇಸವಿಯಂದು ರಾಜಿಯಾಗಿರುತ್ತದೆ ಎಂದು ಆರೋಪಿಸಿ, ದಾವಾ ಆಸ್ತಿಗಳಲ್ಲಿ ತಮಗೆ ಕಾನೂನುಬದ್ಧ ಹಿಸ್ಸೆಯನ್ನು ಕೊಡಿಸಬೇಕೆಂದು ಹಾಗೂ ಮೂಲ ದಾವೆ ನಂ-307/1999 ರಾಜಿ ಡಿಕ್ರಿಯು ತಮಗೆ ಭಾಂದಾಯಿಸುವುದಿಲ್ಲವೆಂದು ಆದೇಶಿಸಬೇಕೆಂದು ಪರಿಹಾರವನ್ನು ಕೋರಿರುತ್ತಾರೆ. ಆದರೆ, 3 ರಿಂದ 5 ನೇ ಪ್ರತಿವಾದಿಗಳು ತಮ್ಮ ಲಿಖಿತ ಹೇಳಿಕೆಯಲ್ಲಿ, ಈಗಾಗಲೇ ಹೊಸದುರ್ಗದ ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯದಲ್ಲಿ ಮೂಲ ದಾವೆ ನಂ-307/1999 ರ ದಾವೆಯಲ್ಲಿ ದಾವಾ ತಪಶೀಲಿನ ಆಸ್ತಿಗಳಿಗೆ ಸಂಬಂಧಿಸಿದಂತೆ ರಾಜಿ ಡಿಕ್ರಿಯಾಗಿರುವುದರಿಂದ ವಾದಿಗಳ ದಾವೆಯನ್ನು ವಜಾಗೊಳಿಸಬೇಕೆಂದು ಪ್ರಾರ್ಥಿಸಿಕೊಂಡಿರುತ್ತಾರೆ. ನಂತರ ಅರ್ಜಿದಾರರು / 3 ರಿಂದ 5 ನೇ ಪ್ರತಿವಾದಿಗಳು ಈ ಮಧ್ಯಂತರ ಅರ್ಜಿ ಸಂಖ್ಯೆ -4 ನ್ನು ಸಲ್ಲಿಸುವುದರ ಮೂಲಕ ವಾದಿಯರ ದಾವೆಯು ಯಾವುದೇ ಕಾನೂನಿನ ಮೂಲಕ ಪ್ರತಿಬಂಧಿತವಾಗಿದೆ ಎಂದು ವಾದಪತ್ರವನ್ನು ತಿರಸ್ಕರಿಸಬೇಕೆಂದು ಕೋರಿರುತ್ತಾರೆ.

**8.** ಅರ್ಜಿದಾರರ / 1 ರಿಂದ 3 ನೇ ಪ್ರತಿವಾದಿಯರು ಪರ ವಕೀಲರು ತಮ್ಮ ವಾದವನ್ನು ಮಂಡಿಸಿಸುತ್ತಾ, ಈಗಾಗಲೇ ಮೂಲ ದಾವೆ ನಂ-307/1999 ನ್ನು 6 ನೇ ಪ್ರತಿವಾದಿಯ ಗಂಡನಾದ ರಂಗಪ್ಪ, ಹೊಸಕೇರಪ್ಪ, 2 ನೇ ಪ್ರತಿವಾದಿ, ರಾಜಪ್ಪನ ವಿರುದ್ಧ ದಾವಾ ಆಸ್ತಿಗಳ ಮೇಲೆ ಸಲ್ಲಿಸಿದ್ದು, ಸದರಿ ದಾವೆಯು ರಾಜಿ ಡಿಕ್ರಿಯಾಗಿದ್ದು, ಸದರಿ ಸ್ವತ್ತುಗಳ ಮೇಲೆಯೆ ವಾದಿಯರು ಈ ದಾವೆಯನ್ನು ಸಲ್ಲಿಸಿರುವುದರಿಂದ, ಎರಡು ದಾವೆಗಳಲ್ಲಿನ ಸ್ವತ್ತುಗಳು ಒಂದೇ ಆಗಿರುತ್ತವೆ. ಆದ್ದರಿಂದ, ಈಗಾಗಲೇ ರಾಜಿ ಡಿಕ್ರಿ ಆದ ಕಾರಣ ಪುನಃ ಪಾಲು ವಿಭಾಗಕ್ಕಾಗಿ ದಾವೆ ಸಲ್ಲಿಸುವುದು ಪ್ರತಿಬಂಧಿತವಾಗಿರುತ್ತದೆ. ಅಲ್ಲದೆ, ವಾದಿಗಳ ದಾವೆ ಯಾವುದೆ ಕಾನೂನಿನ ಮೂಲಕ ಪ್ರತಿಬಂಧಿತವಾಗಿರುವುದರಿಂದ, ವಾದಿಗಳ ವಾದಪತ್ರವನ್ನು ತಿರಸ್ಕರಿಸಬೇಕೆಂದು ತಮ್ಮ ವಾದಪತ್ರವನ್ನು ಮಂಡಿಸಿರುತ್ತಾರೆ.

**9**. ಎದುರುದಾರರ / ವಾದಿಗಳ ಪರ ವಕೀಲರು ತಮ್ಮ ವಾದವನ್ನು ಮಂಡಿಸಿಸುತ್ತಾ, ಹೊಸಕೇರಪ್ಪ ಇವನಿಗೆ ಇಬ್ಬರು ಹೆಂಡತಿಯರಿದ್ದು, ಮೊದಲನೆ ಹೆಂಡತಿ ರಂಗಮ್ಮ, 2 ನೇಯವಳು ಹುಲಮ್ಮ ಇದ್ದು, ವಾದಿಯರು ಮೊದಲನೆ ಹೆಂಡತಿಯ ಹೆಣ್ಣುಮಕ್ಕಳಿದ್ದು, ದಾವಾ ಆಸ್ತಿಗಳು ವಾದಿಯರಿಗೆ ಪಿತ್ರಾರ್ಜಿತವಾದ ಸ್ವತ್ತುಗಳಾಗಿರುತ್ತವೆ. ಈ ಹಿಂದೆ ಸಲ್ಲಿಸಿದ ಮೂಲ ದಾವೆ ನಂ-307/1999 ರಲ್ಲಿ ದಾವಾ ತಪಶೀಲಿನ 1 ನೇ ಆಸ್ತಿಗಳು ಮಾತ್ರ ದಿನಾಂಕಃ 27/01/2000 ರಂದು ರಾಜಿ ಡಿಕ್ರಿಯಾಗಿದ್ದು, 2 ರಿಂದ 4 ನೇ ಆಸ್ತಿಗಳಿಗೆ ಯಾವುದೆ ಡಿಕ್ರಿಯಾಗಿರುವುದಿಲ್ಲ. ಆದ್ದರಿಂದ, ವಾದಿಗಳ ಈ ದಾವೆ ಊರ್ಜಿತವಾಗಿದ್ದು, ಯಾವುದೇ ಕಾನೂನಿನ ಅಡಿಯಲ್ಲಿ ಪ್ರತಿಬಂಧಿತವಾಗಿಲ್ಲ. ಕಾರಣ, ಈ ಮಧ್ಯಂತರ ಅರ್ಜಿಯನ್ನು ವಜಾಗೊಳಿಸಬೇಕೆಂದು ತಮ್ಮ ವಾದವನ್ನು ಮಂಡಿಸಿರುತ್ತಾರೆ.

**10**. ವಾದಿಗಳು ತಮ್ಮ ವಾದಪತ್ರದಲ್ಲಿ ದಾವಾ ಆಸ್ತಿಗಳು ತಮ್ಮ ಪ್ರತಿವಾದಿಗಳ ಪಿತ್ರಾರ್ಜಿತವಾದ ಜಂಟಿ ಕುಟುಂಬದ ಆಸ್ತಿಗಳಾಗಿರುತ್ತವೆ ಎಂದು ಹೇಳಿ ಒಟ್ಟು 4 ಆಸ್ತಿಗಳ ಮೇಲೆ ಈ ದಾವೆಯನ್ನು ಸಲ್ಲಿಸಿರುತ್ತಾರೆ. ಆದರೆ, ಮೂಲ ದಾವೆ ನಂ-307/1999 ರ ಡಿಕ್ರಿಯ ದೃಢಿಕೃತ ನಕಲನ್ನು ಅವಲೋಕಿಸಲಾಗಿ, 6 ನೇ ಪ್ರತಿವಾದಿಯ ಗಂಡನಾದ ರಂಗಪ್ಪ ತಂದೆ

ಹೊಸಕೇರಪ್ಪ ಇವನು ಹೊಸಕೇರಪ್ಪ ತಂದೆ ರಂಗಪ್ಪ, ರಾಜಪ್ಪ ತಂದೆ ಹೊಸಕೇರಪ್ಪ ಹಾಗೂ ಈ ದಾವೆಯ 2 ನೇ ಪ್ರತಿವಾದಿಯ ವಿರುದ್ಧ ಹೊಸದುರ್ಗದ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯದಲ್ಲಿ, ಸಲ್ಲಿಸಿದ ದಾವೆಯಲ್ಲಿ ಹೊಸದುರ್ಗ ತಾಲ್ಲೂಕು, ಮಾಡದಕೆರೆ ಹೋಬಳಿ, ಹೊನ್ನೇನಳ್ಳಿ ಗ್ರಾಮದ 5 ಎಕರೆ 12 ಗುಂಟೆಯ ಜಮೀನಿನ ಪೈಕಿ ಉತ್ತರ ಭಾಗದ 1 ಎಕರೆ 20 ಗುಂಟೆ ಚೆಕ್ಕು ಬಂದಿಃ

ಪೂರ್ವ - ಗುರಂಟಿ ಬಸಪ್ಪನ ಜಮೀನು
ಪಶ್ಚಿಮ- ಫಾರೆಸ್ಟ್ ಲ್ಯಾಂಡ್
ಉತ್ತರ - ನೀಲಪ್ಪರ ಬಸಪ್ಪನ ಜಮೀನು
ದಕ್ಷಿಣ- 3 ನೇ ಪ್ರತಿವಾದಿ ಅಂದರೆ ರಂಗಪ್ಪ ತಂದೆ ಹೊಸಕೇರಪ್ಪನ ಜಮೀನು ಎಂದು ಹೇಳಿ, ಮೇಲೆ ಹೇಳಿದ ನಾಲ್ಕು ಜನರು ರಾಜಿ ಮಾಡಿಕೊಂಡಿದ್ದು, ಅದರಂತೆ ಡಿಕ್ರಿಯಾಗಿರುವುದು ಕಂಡುಬರುತ್ತದೆ. ಆದರೆ, ಈ ದಾವೆಯ ವಾದಿಗಳು ಸದರಿ ದಾವೆಯಲ್ಲಿ ಪಕ್ಷಗಾರರಾಗಿರುವುದಿಲ್ಲ. ಅಲ್ಲದೆ, ಈ ವಾದಿಗಳ ತಂದೆ ಹೊಸಕೇರಪ್ಪ ಇವನ ಹಿಸ್ಸೆಯ ಆಸ್ತಿಗಳು ಯಾವವು ಎಂದು ಸದರಿ ರಾಜಿ ಡಿಕ್ರಿಯಲ್ಲಿ ಕಂಡುಬರುವುದಿಲ್ಲ. ಅಲ್ಲದೆ, ಒಂದು ವೇಳೆ ಸದರಿ ಹೊಸಕೇರಪ್ಪ ಇವನಿಗೆ ರಾಜಿ ಡಿಕ್ರಿಯ ಮೂಲಕ ಆಸ್ತಿಗಳು ಹಿಸ್ಸೆಗೆ ಬಂದಿದ್ದರೆ, ಈಗ ಸದರಿ ಹೊಸಕೇರಪ್ಪ ಮೃತಪಟ್ಟಿದ್ದರಿಂದ, ಅವನ ಎಲ್ಲಾ ವಾರಸುದಾರರಿಗೆ ಅವನ ಹಿಸ್ಸೆಗೆ ಬಂದ ಆಸ್ತಿಗಳಲ್ಲಿ ಹಿಸ್ಸೆಯ ಹಕ್ಕು ಇರುವುದರಿಂದ, ಅದನ್ನು ನಿರ್ಧರಿಸುವ ಸಲುವಾಗಿ ಈ ದಾವೆಯ ವಿಚಾರಣೆ ಅವಶ್ಯವಾಗಿರುತ್ತದೆ. ಅಲ್ಲದೆ, ಒಂದು ವೇಳೆ ಸದರಿ ರಾಜಿಯ ಡಿಕ್ರಿಯ ಪ್ರಕಾರ ಹೊಸಕೇರಪ್ಪನಿಗೆ ಆಸ್ತಿಗಳು ಬಂದಿಲ್ಲದೇ ಇದ್ದರೆ, ಈ ಎಲ್ಲಾ ದಾವಾ ಆಸ್ತಿಗಳಲ್ಲಿ ಸದರಿ ಹೊಸಕೇರಪ್ಪ ಹೊಂದಿದ ಹಿಸ್ಸೆಯ ಹಕ್ಕು ಎಷ್ಟು ಮತ್ತು ಈಗ ಆ ಹಿಸ್ಸೆಯ ಆಸ್ತಿಗಳು ಯಾವ ಯಾವ ವಾರಸುದಾರರಿಗೆ ಹೋಗಬೇಕು ಎನ್ನುವುದನ್ನು ನಿರ್ಧರಿಸಲು ಈ ದಾವೆಯ ವಿಚಾರಣೆ ಅವಶ್ಯವಾಗಿರುತ್ತದೆ. ಅಲ್ಲದೆ, ಈ ದಾವೆಯಲ್ಲಿ ಇರುವಂತಹ ಎಲ್ಲಾ ಆಸ್ತಿಗಳು ಸದರಿ ಮೂಲ ದಾವೆ ನಂ-307/1999 ರ ರಾಜಿ ಡಿಕ್ರಿಯಲ್ಲಿ ಇರುವುದು ಕಂಡುಬರುವುದಿಲ್ಲ. ಆದ್ದರಿಂದ, ಈ ಎಲ್ಲಾ ದಾವಾ ಆಸ್ತಿಗಳಲ್ಲಿ ವಾದಿಗಳಿಗೆ ಹಿಸ್ಸೆ ಇದೆ ಅಥವಾ ಇಲ್ಲ. ಅಲ್ಲದೆ, ಈಗಾಗಲೇ ಈ ಎಲ್ಲಾ ದಾವಾ ಆಸ್ತಿಗಳ ಮೇಲೆ ಮೂಲ ದಾವೆ ನಂ-307/1999 ರಲ್ಲಿ

ಇತ್ಯರ್ಥ ಆಗಿದೆ ಅಥವಾ ಇಲ್ಲ ಎನ್ನುವುದನ್ನು ನಿರ್ಧರಿಸಲು ಈ ದಾವೆಯ ವಿಚಾರಣೆ ಅವಶ್ಯವಾಗಿರುತ್ತದೆ.

**11**. ಅರ್ಜಿದಾರರು / 3 ರಿಂದ 5 ನೇ ಪ್ರತಿವಾದಿಗಳು ಈ ಮಧ್ಯಂತರ ಅರ್ಜಿಯಲ್ಲಿ ವಾದಿಯರ ದಾವೆಯು ಯಾವುದೆ ಕಾನೂನಿನ ಮೂಲಕ ಪ್ರತಿಬಂಧಿತವಾಗಿದೆ ಎಂದು ಹೇಳಿ ವಾದಪತ್ರವನ್ನು ತಿರಸ್ಕರಿಸಬೇಕೆಂದು ಕೋರಿರುತ್ತಾರೆ. ಆದರೆ, ಯಾವ ಕಾನೂನಿನ ಅಡಿಯಲ್ಲಿ ವಾದಿಗಳ ಈ ದಾವೆ ಪ್ರತಿಬಂಧಿತವಾಗಿದೆ ಎಂದು ನಿರ್ದಿಷ್ಟವಾಗಿ ಹೇಳಿಲ್ಲ. ಅಲ್ಲದೆ, ವಾದಿಗಳ ವಾದಪತ್ರವನ್ನು ಕೂಲಂಕುಷವಾಗಿ ಅವಲೋಕಿಸಲಾಗಿ, ವಾದಿಗಳ ಈ ದಾವೆಯು ಯಾವುದೆ ಕಾನೂನಿನ ಅಡಿಯಲ್ಲಿ ಪ್ರತಿಬಂಧಿತವಾಗಿಲ್ಲ ಎಂದು ಕಂಡುಬರುತ್ತದೆ. ಅಲ್ಲದೆ, ಮೂಲ ದಾವೆ ನಂ-307/1999 ರಲ್ಲಿ ಕೇವಲ ರಂಗಪ್ಪ ಇವನ ಹಿಸ್ಸೆಗೆ ಆಸ್ತಿ ಬಂದಿರುವುದು ಮಾತ್ರ ಹೇಳಿದ್ದು, ಆದರೆ ಉಳಿದ ಈ ದಾವಾ ಆಸ್ತಿಗಳು ಯಾರ ಹಿಸ್ಸೆಗೆ ಹೋಗಿರುತ್ತವೆ ಎನ್ನುವುದನ್ನು ಸದರಿ ದಾವೆಯ ರಾಜಿ ಡಿಕ್ರಿಯಲ್ಲಿ ಹೇಳದೆ ಇರುವ ಕಾರಣ, ಈ ದಾವೆಯನ್ನು ಈ ನ್ಯಾಯಾಲಯ ವಿಚಾರಣೆ ಮಾಡುವ ಅವಶ್ಯಕತೆ ಇರುತ್ತದೆ. ಆದ್ದರಿಂದ, ಅರ್ಜಿದಾರರು / 3 ರಿಂದ 5 ನೇ ಪ್ರತಿವಾದಿಗಳು ಈ ಅರ್ಜಿಯಲ್ಲಿ ಕೋರಿದಂತೆ, ವಾದಿಗಳ ಈ ದಾವೆಯು ಯಾವುದೆ ಕಾನೂನಿನ ಅಡಿಯಲ್ಲಿ ಪ್ರತಿಬಂಧಿತವಾಗಿ ಊರ್ಜಿತವಾಗಿಲ್ಲ ಎನ್ನುವುದನ್ನು ತೋರಿಸಿಲ್ಲ. ಆದ್ದರಿಂದ, ಅರ್ಜಿದಾರರ ಈ ಮಧ್ಯಂತರ ಅರ್ಜಿಯು ಪುರಸ್ಕರಿಸುವಂತಹದಲ್ಲವೆಂದು ತೀರ್ಮಾನಿಸಿ, **ಅಂಶ-1 ನ್ನು ನಕರಾತ್ಮಕವಾಗಿ ಉತ್ತರಿಸಿದ್ದೇನೆ.**

**12.** **<u>ಅಂಶ-2</u>** – ಮೇಲಿನ ಅಂಶಗಳಲ್ಲಿ ಚರ್ಚಿಸಲಾದ ಕಾರಣಗಳಿಗೆ ಈ ಕೆಳಕಂಡಂತೆ ಮಾಡಿದಃ

**<u>ಆದೇಶ</u>**

ಅರ್ಜಿದಾರರು / 3 ರಿಂದ 5 ನೇ ಪ್ರತಿವಾದಿಗಳು ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 7 ನಿಯಮ 11(ಡಿ) ಹಾಗೂ ಸಹವಾಚಕ ಕಲಂ 151 ರ ಅಡಿಯಲ್ಲಿ ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆ-4 ನ್ನು ರೂ.100/- ಖರ್ಚಿನ ಮೇಲೆ ವಜಾಗೊಳಿಸಲಾಗಿದೆ.

(ನನ್ನ ಉಕ್ತಲೇಖನದ ಪ್ರಕಾರ ಶೀಘ್ರಲಿಪಿಗಾರರಿಂದ ನೇರವಾಗಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಿ ಅದರಲ್ಲಿದ್ದ ಲೋಪದೋಷಗಳನ್ನು ತಿದ್ದಿ ಇಂದು ದಿನಾಂಕ 30 ನೇ ಜೂನ್ 2025 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು)

ಸಹಿ/-

**(ವೈ. ಕೆ. ಬೇನಾಳ),**
**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,**
**ಹೊಸದುರ್ಗ.**